ಸೀಮಿತಗೊಳಿಸಿ ಅಗತ್ಯ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಪೂರೈಸಲು ನಕ್ಷೆ ಮತ್ತು ಅಂದಾಜನ್ನು ಸಲ್ಲಿಸಲು ಲೋಕೋಪಯೋಗಿ ಇಲಾಖೆಯವರಿಗೆ ಸೂಚಿಸಲಾಯಿತು.

ಅದರಂತೆ, ಮುಖ್ಯ ವಾಸ್ತು ಶಿಲ್ಪಿಗಳೊಡನೆ ಹಲವಾರು ಬಾರಿ ಸಭೆಗಳನ್ನು ನಡೆಸಿ, ಪರಿಷ್ಕೃತ ನಕ್ಷೆಗಳನ್ನು ತಯಾರಿಸಲಾಗಿದೆ. ಅದರಂತೆ ಲೋಕೋಪಯೋಗಿ ಇಲಾಖೆಯ ಅಭಿಯಂತರರು ಅಂದಾಜುಗಳನ್ನು ತಯಾರಿಸಿಕೊಟ್ಟಿರುತ್ತಾರೆ. ಅಂದಾಜು ಪಟ್ಟಿಗಳಿಗೆ ದಿನಾಂಕ:4.7.2009 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಆದರೆ ಕಾಮಗಾರಿ ಇನ್ನೂ ಪ್ರಾರಂಭವಾಗಿರುವುದಿಲ್ಲ

ಮುಖ್ಯ ವಾಸ್ತುಶಿಲ್ಪಿಗಳಿಂದ ಪರಿಷ್ಕೃತ ನಕ್ಷೆ ಪಡೆಯಲು ಹಾಗೂ ಅದರನ್ವಯ ಲೋಕೋಪಯೋಗಿ ಇಲಾಖೆಯಿಂದ ಅಂದಾಜು ಪಟ್ಟಿ ಪಡೆಯುವಲ್ಲಿ ಸಾಕಷ್ಟು ಕಾಲ ವ್ಯಯವಾಗಿರುತ್ತದೆ. ಆಗಿನ ವಿನ್ಯಾಸ ಮತ್ತು ಅಂದಾಜು ಪಟ್ಟಿಗಳು ಹಳೆಯದಾಗಿರುತ್ತದೆ. ಪ್ರಸ್ತುತ ವಿನ್ಯಾಸಗಳಿಗೆ ಹೊಂದಾಣಿಕೆ ಆಗುವುದಿಲ್ಲ.

ಇತ್ತೀಚೆಗೆ ಶಿವಮೊಗ್ಗದಲ್ಲಿ ನೂತನ ಮಾದರಿ ಕಾರಾಗೃಹ ನಿರ್ಮಿಸಲು ಯೋಜಿಸಿ ನುರಿತ ವಾಸ್ತುಶಿಲ್ಪಿಗಳಿಂದ ಆಧುನಿಕ ಕಾರಾಗೃಹದ ವಿನ್ಯಾಸ ಮತ್ತು ನಕ್ಷೆ ತಯಾರಾಗುತ್ತಿದೆ. ಈ ಹೊಸ ವಿನ್ಯಾಸದಂತೆಯೇ ಆಳಂದದಲ್ಲಿಯೂ ಸಹ ಮಾದರಿ ಕಾರಾಗೃಹ ನಿರ್ಮಿಸಲು ಉದ್ದೇಶಿಸಿ, ಈ ಹಿಂದೆ ನೀಡಲಾಗಿದ್ದ ಆಡಳಿತಾತ್ಮಕ ಮಂಜೂರಾತಿಯನ್ನು ತಾತ್ಕಾಲಿಕವಾಗಿ ದಿನಾಂಕ:29.5.2010ರಂದು ಹಿಂತೆಗೆದುಕೊಳ್ಳಲಾಗಿದೆ. ಆಧುನಿಕ ವಿನ್ಯಾಸ ಮತ್ತು ನಕ್ಷೆಗಳು ತಯಾರಾದ ಕೂಡಲೆ ಲೋಕೋಪಯೋಗಿ ಇಲಾಖೆಯಿಂದ ಅಂದಾಜುಪಟ್ಟಿ ಕಾಮಗಾರಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ರಸ್ತೆ ಅಗಲೀಕರಣ

219(544) ಶ್ರೀ ಸುಭಾಷ್ ಆರ್ ಗುತ್ತೇದಾರ್:(ಆಳಂದ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಆಳಂದ ನಗರದ ರಜವಿ ರಸ್ತೆಯನ್ನು (ಔರಾದ್ ಸದಾಶಿವಗಡ್ ರಾಜ್ಯ ಹೆದ್ದಾರಿ ವ್ಯಾಪ್ತಿಯ) ಅಗಲೀಕರಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರಸ್ತೆಯ ಅಗಲೀಕರಣಕ್ಕಾಗಿ ಖಾಸಗಿ ಜಮೀನು ಹಾಗೂ ಮನೆಗಳನ್ನು ಸರ್ಕಾರ ವಶಪಡಿಸಿಕೊಳ್ಳಲಾಗುತ್ತಿದೆಯೇ; ಹಾಗಿದ್ದಲ್ಲಿ ವಶಪಡಿಸಿಕೊಳ್ಳಲಾದ ಜಮೀನು ಹಾಗೂ ಮನೆಗಳ ವಿಸ್ತೀರ್ಣವೆಷ್ಟು (ಪೂರ್ಣ ಮಾಹಿತಿ ನೀಡುವುದು);

ಇ) ವಶಪಡಿಸಿಕೊಳ್ಳಲಾದ ಜಮೀನಿಗೆ ಹಾಗೂ ಮನೆಗಳಿಗೆ ಪರಿಹಾರ ನೀಡಲಾಗಿದೆಯೇ, ಹಾಗಿಲ್ಲದಿದ್ದಲ್ಲಿ, ಕಾರಣಗಳೇನು (ಮಾಹಿತಿ ನೀಡುವುದು)?

ಶ್ರೀ ಸಿ ಎಂ ಉದಾಸಿ(ಲೋಕೋಪಯೋಗಿ ಸಚಿವರು):

ಅ) ಬಂದಿದೆ.

ಆ) ಸರ್ಕಾರದಿಂದ ಯಾವುದೇ ಜಮೀನು, ನಿವೇಶನ, ಮನೆಗಳನ್ನು ವಶಪಡಿಸಿಕೊಂಡಿರುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ರಾಜ್ಯ ಹೆದ್ದಾರಿಗಳು

220(545) ಶ್ರೀ ಸುಭಾಷ ಆರ್ ಗುತ್ತೇದಾರ್:(ಆಳಂದ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ರಾಜ್ಯ ಹೆದ್ದಾರಿಗಳ ಸಂಖ್ಯೆ ಎಷ್ಟು ಹಾಗೂ ಯಾವುವು (ಪೂರ್ಣ ಮಾಹಿತಿ ನೀಡುವುದು);

ಆ) ವಾಗದರಿ–ರಿಬ್ಬನಪಲ್ಲಿ ರಸ್ತೆಯು ಕರ್ನಾಟಕ ರಾಜ್ಯಕ್ಕೆ ಸೇರಿದೆಯೇ;

ಇ) ಹಾಗಿದ್ದಲ್ಲಿ, ಈ ರಸ್ತೆಯ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ಈ ರಸ್ತೆಯನ್ನು ಅಭಿವೃದ್ಧಿಪಡಿಸಲಾಗುತ್ತಿರುವ ಯೋಜನೆ ಯಾವುದು ಹಾಗೂ ಇದಕ್ಕಾಗಿ ಅಂದಾಜಿಸಲಾಗಿರುವ ಅನುದಾನದ ಮೊತ್ತವೆಷ್ಟು;

ಉ) ಈ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಸಿ ಎಂ ಉದಾಸಿ(ಲೋಕೋಪಯೋಗಿ ಸಚಿವರು):

ಅ) ರಾಜ್ಯದಲ್ಲಿನ ರಾಜ್ಯ ಹೆದ್ದಾರಿಗಳ ಸಂಖ್ಯೆ ಮತ್ತು ವಿವರಗಳನ್ನು ಪ್ರತ್ಯೇಕವಾಗಿ ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಆ) ವಾಗದರಿ–ರಿಬ್ಬನಪಲ್ಲಿ ರಸ್ತೆಯು ಕರ್ನಾಟಕ ರಾಜ್ಯಕ್ಕೆ ಸೇರಿದೆ.